ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ನಗರಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೆ, ಆ ಪೈಪ್‌ಗಳನ್ನು ಯಾರೋ ತೆಗೆದುಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ನೀರಿನ ಬವಣೆ ಬಗ್ಗೆ ಹೇಳಿದ್ದಾರೆ. ನೀರು ಅವರಿಗೆ ಸಗತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಅಂಕೋಲಾ ಪುರಸಭೆಯ ನೌಕರ ವಿಠಲಾಂಡಾ ಎನ್ನುವವರ ಶವ ಬಾವಿಯಲ್ಲಿ ಪತ್ತೆಯಾಗಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್(ಭಟ್ಕಳ).—ಅಧ್ಯಕ್ಷರೇ, ಅಂಕೋಲಾ ತಾಲ್ಲೂಕಿನ ವಂದಿಗೆ ಗ್ರಾಮದಲ್ಲಿಯ ಒಂದು ಸರಕಾರಿ ಬಾವಿಯಲ್ಲಿ ಒಂದು ಶವ ಪತ್ತೆಯಾಗಿದ್ದು ಆ ಶವ ಅಂಕೋಲಾ ಪುರ ಸಭೆಯ ಗುಮಾಸ್ತ 'ವಿಠಲಾಂಡಾ' ಎನ್ನುವವರೆಂದು ಗುರುತಿಸಲ್ಪಟ್ಟಿದೆ. ಈ ಶವವನ್ನು ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಸಾಗಿಸದೇ ಮೃತರ ಊರಿಗೆ ಸಾಗಿಸಲಾಗಿದೆ ಎಂದು ಹೇಳಲಾಗುತ್ತಿದೆ. ಕಾರಣ ಇದನ್ನು ಕೊಲೆ ಎಂದು ಜನರು ಶಂಕಿಸಿದ್ದಾರೆ. ಈ ವಿಚಾರವನ್ನು 'ಮುಂಗಾರು' ವರದಿ ಮಾಡಿದೆ. ಈ ಕೊಲೆಯನ್ನು ಮುಚ್ಚಿಸುವುದಕ್ಕೆ ಅಂಕೋಲೆಯ ಕೆಲವು ರಾಜಕೀಯ ಪುಡಾರಿಗಳು ಪ್ರಯತ್ನಿಸುತ್ತಿದ್ದಾರೆಂದು ಹೇಳಲಾಗುತ್ತಿದೆ. ಆ ಕಾರಣದಿಂದ ಅಂಕೋಲೆಯ ನಾಗರೀಕರು ತೀವ್ರ ಭಯಗೊಂಡಿದ್ದಾರೆಂದು ಹೇಳಲಾಗುತ್ತಿದೆ. ಶವವನ್ನು ಪೋಸ್ಟ್ ಮಾರ್ಟಮ್ ಮಾಡದೇ ಶವ ಸಂಸ್ಕಾರಕ್ಕೆ ಒಳಪಡಿಸಿದ ಕಾರಣಕ್ಕೆ ಸರಕಾರ ವಿವರ ನೀಡಬೇಕು. ಆ ರೀತಿ ಮಾಡದಿದ್ದಲ್ಲಿ ಪೋಲೀಸರು ನಿಷ್ಕ್ರಿಯರಾಗಿದ್ದಾರೆಂದು ಅನ್ನಿಸುತ್ತಿದ್ದು ಅದಕ್ಕೆ ಯಾವ ಪುಡಾರಿ ಒತ್ತಾಯ ತಂದಿದ್ದಾರೆಂಬುದನ್ನು ಸದನಕ್ಕೆ ಕೂಡಲೇ ತಿಳಿಸಿ ಮುಂದಿನ ಕ್ರಮ ಕೈಗೊಳ್ಳಲು ಸರಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ(ಮಾನ್ಯ ಗೃಹ ಸಚಿವರು).—ಸಭೆಗೆ ನನ್ನ ಹತ್ತಿರ ಈ ಬಗ್ಗೆ ಮಾಹಿತಿ ಇಲ್ಲಸಿ ಮಾಹಿತಿಯನ್ನು ತರಿಸಿ ಸಭೆಗೆ ತಿಳಿಸುತ್ತೇನೆ.

IV ಹರಪ್ಪನ ಹಳ್ಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ,

ಶ್ರೀ ಬಿ. ಎಚ್. ಯಂಕಾನಾಯ್ಕ್.—ಹರಪ್ಪನಹಳ್ಳಿ ನಗರದಲ್ಲಿ ಅನೇಕ ವರ್ಷಗಳಿಂದ ಕುಡಿಯುವ ನೀರಿನ ಅಭಾವ ಇರುವುದರಿಂದ ಸಂಬಧಪಟ್ಟ ಸಚಿವರು ತಾರೀಖು ೨೮-೩-೮೫ರಂದು ವಿಧಾನಸಭೆಯಲ್ಲಿ ಹರಪ್ಪನಹಳ್ಳಿ ನಗರದಲ್ಲಿ ಇರುವ ತೊಂದರೆಯನ್ನು ಒಂದು ವಾರದೊಳಗೆ ಸರಿಪಡಿಸಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದಾರೆ. ಇದುವರೆವಿಗೂ ವಿಳಂಬವಾಗುವುದಕ್ಕೆ ಕಾರಣವೇನು ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎರಡನೆಯ ಹಂತದ ಯೋಜನೆಯಲ್ಲಿ ೯.೬ ಲಕ್ಷ ರೂಪಾಯಿಗಳು. ಈ ಯೋಜನೆಯಲ್ಲಾದರೂ ಜರೂರಾಗಿ ಈ ಕಾರ್ಯವನ್ನು ಆದಷ್ಟು ಬೇಗನೆ ನೆರವೆರಿಸಿ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ನಗರಾಡಳಿತ ಸಚಿವರು).—ಕುಡಿಯುವ ನೀರಿನ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಆದಷ್ಟು ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

V ಗುಲ್ಬರ್ಗ ನಗರದ ಕುಷ್ಟ ರೋಗಿಗಳ ಪುನರ್ ವಸತಿ ಕೇಂದ್ರಕ್ಕೆ ಕಟ್ಟಡ ಸಲಕರಣೆ ಮತ್ತು ಔಷಧಿಗಳನ್ನು ಒದಗಿಸುವ ಬಗ್ಗೆ.

ಶ್ರೀ ಮಾಲೀಕಯ್ಯ ಗುತ್ತೇದಾರ್.—ಅಧ್ಯಕ್ಷರೇ, ಗುಲ್ಬರ್ಗಾ ನಗರಕ್ಕೆ 'ಕುಷ್ಟ ರೋಗಿಗಳ ಪುನರ್ ವಸತಿ ಕೇಂದ್ರ' ರೈಲ್ವೆ ನಿಲ್ದಾಣದಲ್ಲಿ ಮಂಜೂರಾಗಿದೆ. ಇದಕ್ಕೆ ವೈದ್ಯರನ್ನು ಮತ್ತು ಗುಮಾಸ್ತರನ್ನೊಳಗೊಂಡು ಕೆಲವು ಸಿಬ್ಬಂದಿಯನ್ನು ನಿಯಮಿಸಲಾಗಿದೆ. ಆದರೆ ಇಲ್ಲಿಯವರೆಗೆ ಕಟ್ಟಡ ಸಲಕರಣೆ ಹಾಗೂ ಔಷಧಿಗಳನ್ನು ಒದಗಿಸಿಲ್ಲ. ಹೀಗಾಗಿ ಈಗ ಈ ಸಿಬ್ಬಂದಿಗಳ ವೆಚ್ಚ ವ್ಯರ್ಥವಾಗಿ ನಡೆದಿದೆ, ಅದಕ್ಕೆ ಕಟ್ಟಡ, ಸಲಕರಣೆ ಹಾಗೂ ಔಷಧಿಗಳನ್ನು ಕೂಡಲೇ ವ್ಯವಸ್ಥೆ ಪಡಿಸಿ ಯಾವ ಉದ್ದೇಶ